**ದಿನಾಂಕಃ 06.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಮ್ ಎಮ್ ಎಮ್ ಅವರಿಂದಃ**

9. ಬುರ್ಲಿ ಹನಮಪ್ಪ ನನ್ನ ತಾಯಿಗೆ ಬಿಟ್ಟುಕೊಟ್ಟ ಮನೆಯಲ್ಲಿ ನನಗೆ, ನನ್ನ ತಾಯಿಗೆ ಮತ್ತು ನನ್ನ ತಂಗಿಗೆ ಹಕ್ಕು ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಾಯಿಗೆ ಅಷ್ಟೆ ಸಂಬಂಧ ಎಂದು ನುಡಿಯುತ್ತಾರೆ. ನಾನು ಈಗ ವಾಸ ಇರುವ ಮನೆ ನಂಬರ ಗೊತ್ತಿಲ್ಲ. ನಮ್ಮ ಊರಲ್ಲಿ ನಮ್ಮ ಕುಟುಂಬಕ್ಕೆ ಸೇರಿ ನನ್ನ ಗಂಡ ಮತ್ತು ನಮಗೆ ಸೇರಿ ಒಂದೇ ಮನೆ ಇದೆ. ನನ್ನ ಗಂಡನ ಹೆಸರು ಹನಮಪ್ಪ ನಿಂಗಪ್ಪ ಮೇಟಿ. ಅವನ ಹೆಸರಿನಲ್ಲಿ ಮನೆ ನಂ. 70 ಇದೆ ಎಂದರೆ ಸರಿ. ಸದರಿ ಮನೆ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ಮೂಲ ಮಾಲೀಕರು ಕರಿಯಪ್ಪ ತಂದೆ ದ್ಯಾಮಣ್ಣ ಬುರ್ಲಿ ಎಂದರೆ ಸರಿ. ಅವರ ಹೆಸರಿನಲ್ಲಿದ್ದ ಮನೆ ನನ್ನ ಗಂಡನ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಈಗ ತೋರಿಸಿದ ಉತಾರಗಳು ಸದರಿ ಮನೆಯ ಉತಾರಗಳು ಎಂದರೆ ಸರಿ. ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದ ಅವರಿಗೆ ಮಕ್ಕಳು ಇಲ್ಲದ ಸಲುವಾಗಿ ಮಾರಿದ್ದರಿಂದ ನನ್ನ ಮಗ ತೆಗೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ನನ್ನ ಮಗ ಯಾವಾಗ ಖರೀದಿ ಹಿಡಿದಿರುತ್ತಾನೆ ಎಂದರೆ ಸುಮಾರು ಎರಡೂವರೆ ವರ್ಷದ ಹಿಂದೆ ನುಡಿಯುತ್ತಾರೆ. ಎಷ್ಟು ಹಣಕ್ಕೆ ಖರೀದಿ ಹಿಡಿದಿರುತ್ತಾನೆ ಎಂದು ಗೊತ್ತಿಲ್ಲ. ನಾನು ಖರೀದಿ ವ್ಯವಹಾರದಲ್ಲಿ ಭಾಗವಹಿಸಿದ ಬಗ್ಗೆ ನನಗೆ ನೆನಪು ಇಲ್ಲ. ಸದರಿ ಮನೆಯಲ್ಲಿಯೇ ನನ್ನ ತಾಯಿ ವಾಸ ಇದ್ದಾಳೆ ಎಂದರೆ ಸರಿ. ಸದರಿ ಆಸ್ತಿಯ ಮಾಲೀಕರು ಕರಿಯಪ್ಪ ದ್ಯಾಮಣ್ಣ ಬುರ್ಲಿ ತೀರಿಕೊಂಡು ಸುಮಾರು 5-6 ವರ್ಷ ಆಗಿದೆ ಎಂದರೆ ಇರಬಹುದು. ಆತನಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಆತನಿಗೆ 6 ಜನ ಹೆಣ್ಣು

ಮಕ್ಕಳು ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆ ವ್ಯವಹಾರ ಕರಿಯಪ್ಪ ಮತ್ತು ನನ್ನ ಮಗನ ನಡುವೆ ಆಗಿದೆ. ನಾನು ಹೇಳಿದಂತೆ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಕರಿಯಪ್ಪ ಮೃತ ಪಟ್ಟ ನಂತರ ಸದರಿ ಮನೆಯನ್ನು 2021 ರಲ್ಲಿ ನನ್ನ ಗಂಡನ ಹೆಸರಿನಲ್ಲಿ ಮಾಡಿಸಿರುತ್ತೇವೆ ಎಂದರೆ ಸರಿ. ಸದರಿ ಮನೆಯನ್ನು ಹೊರತುಪಡಿಸಿ ನಮ್ಮ ಗಂಡನ ಕುಟುಂಬಕ್ಕೆ ಊರಲ್ಲಿ ಯಾವುದೇ ಮನೆ ಇಲ್ಲ ಎಂದರೆ ಸರಿ. 2013 ರಲ್ಲಿ ಸದರಿ ಮನೆಯ ಮೇಲೆ ವಾದಿ ದಾವೆ ಮಾಡಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಗಂಡನ ಹೆಸರಿನಲ್ಲಿ ಖರೀದಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಖರೀದಿ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಮನೆಯಲ್ಲಿಯೇ ನಾನು, ನನ್ನ ಗಂಡ, ಮಕ್ಕಳು ಹಾಗೂ ತಾಯಿ ವಾಸ ಇದ್ದೇವೆ ಎಂದರೆ ಸಾಕ್ಷಿಯು ನನ್ನ ತಾಯಿ ಅವರ ಅಣ್ಣನ ಬಳಿ ಇದ್ದಾಳೆ ಎಂದು ನುಡಿಯುತ್ತಾರೆ.

10. ನನ್ನ ತಾಯಿ, ನನ್ನ ದೊಡ್ಡಪ್ಪನ ಮೇಲೆ ಹಾಕಿದ ಕೇಸ ಮುಗಿಯುವ ಹಂತಕ್ಕೆ ವಾದಿಯ ಮದುವೆ ಆಗಿತ್ತು, ಆಕೆ ಆಗ ಗಂಡನ ಮನೆಯಲ್ಲಿ ವಾಸ ಇದ್ದಳು ಎಂದರೆ ನೆನಪು ಇಲ್ಲ. ಆ ಸಮಯದಲ್ಲಿ ನನ್ನ ಮದುವೆ ಆಗಿತ್ತು. ಆ ಸಮಯದಲ್ಲಿ ನನ್ನ ತಾಯಿ ನನ್ನ ಜೊತೆ ವಾಸ ಇದ್ದಳು ಎಂದರೆ ನನ್ನ ತಂಗಿಯ ಜೊತೆ 4 ದಿನ, ನನ್ನ ಜೊತೆ 4 ದಿನ ಇರುತ್ತಿದ್ದಳು. ಆ ಕೇಸನಲ್ಲಿ ಅಂತಿಮವಾಗಿ ನನ್ನ ತಾಯಿಗೆ 1 ಲಕ್ಷ ಹಣ ಕೊಟ್ಟಿರುತ್ತಾಳೆ ಎಂದು ನನಗೆ ಮತ್ತು ವಾದಿಗೆ ಹೇಳಿರುತ್ತಾಳೆ ಎಂದರೆ ಗೊತ್ತಿಲ್ಲ. ಅದೇ ರೀತಿ ಆ ಹಣವನ್ನು ಹಾಗೆಯೇ ಇಟ್ಟರೇ ಖರ್ಚು ಆಗುತ್ತದೆ, ಆದುದರಿಂದ ಒಂದು ಆಸ್ತಿ ತೆಗೆದುಕೊಳ್ಳೋಣ ಎಂದು ಒಂದು ತೀರ್ಮಾನ ಮಾಡಿದ್ದಳು ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ತಾಯಿ ಒಂದೇ ಊರಿನಲ್ಲಿ ಇರುವುದರಿಂದ ಆಸ್ತಿಯನ್ನು ನನ್ನ ಹೆಸರಿನಲ್ಲಿ ತೆಗೆದುಕೊಳ್ಳುತ್ತೇನೆ ಎಂದು ನನ್ನ ತಾಯಿ ವಾದಿಗೆ ಹೇಳಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಯಾರ ಹೆಸರಿನಲ್ಲಿ ಕೃಷಿ ಜಮೀನು ಇರುತ್ತದೋ ಅವರು ಮಾತ್ರ ಜಮೀನು ಖರೀದಿ

ಮಾಡಬಹುದು ಎಂದು ಸರ್ಕಾರದ ನಿರ್ಭಂದ ಇದ್ದ ಕಾರಣ ನನ್ನ ತಾಯಿ ನನ್ನ ಹೆಸರಿನಲ್ಲಿ ಜಮೀನು ಖರೀದಿ ಮಾಡಲು ನಿರ್ಧಾರ ಮಾಡಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡನ ಹೆಸರಿನಲ್ಲಿ 4 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಇರಬಹುದು. ಆ ಸಮಯದಲ್ಲಿ 63/* ಹಿಸ್ಸಾ ಇ ದಲ್ಲಿ 4 ಎಕರೆ 10 ಗುಂಟೆ ಯಲಬುರ್ತಿ ಗ್ರಾಮದಲ್ಲಿ ನನ್ನ ಗಂಡನ ತಂದೆ ಹನಮಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಐಟಂ ನಂ. 1 ರ ಜಮೀನು ನನ್ನ ಹೆಸರಿಗೆ ಖರೀದಿ ಆದ ನಂತರ ನನ್ನ ಗಂಡ ಸದರಿ ಮೇಲೆ ಹೇಳಿದ ಜಮೀನನ್ನು ನರಸಮ್ಮ ಗಂಡ ಕುಂಟೆಪ್ಪ ಪೊಲೀಸ ಪಾಟೀಲ ಸಾ: ಶಾಖಾಪೂರ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ, ಅವರ ಜಮೀನು ಅವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ರೂ.68,000/- ಗಳಿಗೆ ದಿನಾಂಕ 30-12-2002 ರಂದು ಹನಮಪ್ಪ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಸದರಿ ಜಮೀನು ನಮ್ಮ ಕುಟುಂಬದ ಹೆಸರಿನಲ್ಲಿ ಇರುವುದರಿಂದ ದಾವಾ ಐಟಂ ನಂ. 1 ರ ಆಸ್ತಿ ನನ್ನ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರ ಆಸ್ತಿಯನ್ನು ಖರೀದಿ ಮಾಡುವ ಆರ್ಥಿಕ ಸಾಮರ್ಥ್ಯ ನಮಗೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರ ಆಸ್ತಿ ನಮ್ಮ ಸ್ವಯಾರ್ಜಿತ ಆಸ್ತಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ದಾವಾ ಐಟಂ ನಂ. 1 ರ ಆಸ್ತಿಯ ಸರ್ವೆ ನಂಬರ ಮತ್ತು ವಿಸ್ತೀರ್ಣ ಎಷ್ಟು ಎಂದು ನಾನು ಶಾಲೆ ಕಲಿಯದ ಕಾರಣ ಹೇಳಲು ಬರುವುದಿಲ್ಲ. ಸದರಿ ಆಸ್ತಿಯನ್ನು ರೂ.48,000/- ಗಳಿಗೆ 25 ವರ್ಷದ ಹಿಂದೆ ಖರೀದಿ ಮಾಡಿರುತ್ತೇವೆ. ಖರೀದಿ ವ್ಯವಹಾರದಲ್ಲಿ ಯಾರು ಭಾಗವಹಿಸಿದ್ದರು ಎಂದು ನೆನಪು ಇಲ್ಲ. ನನ್ನ ತಾಯಿ ಸದರಿ ವ್ಯವಹಾರದಲ್ಲಿ ಭಾಗವಹಿಸಿಲ್ಲ. ಮೂಲ ಖರೀದಿ ಪತ್ರ ಎಲ್ಲಿದೆ ಎಂದು ಗೊತ್ತಿಲ್ಲ. ಮೂಲ ಖರೀದಿ ಪತ್ರದಲ್ಲಿ ಯಲ್ಲಮ್ಮ ಗಂಡ ಗೋವಿಂದಗೌಡ ಮಾಲೀಪಾಟೀಲ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ಮೂಲ ಖರೀದಿ ಪತ್ರವನ್ನು ಹಾಜರುಪಡಿಸಿದರೆ ಆಕೆ

ಸಹಿ ಮಾಡಿರುವುದು ಗೊತ್ತಾಗುತ್ತದೆ ಎಂದು ನಾನು ದೃಢಿಕೃತ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

12. ಮೂಲತಃ ಕೇಸನ್ನು ಯಾರು ಹಾಕಿರುತ್ತಾರೆ ಎಂದು ನನಗೆ ಗೊತ್ತಿದೆ. ಈ ಕೇಸನ್ನು ಮೂಲತಃ ನನ್ನ ತಾಯಿ, ನನ್ನ ತಂಗಿಯ ಜೊತೆ ಕೂಡಿ ಹಾಕಿದ್ದಳು ಎಂದರೆ ಸಾಕ್ಷಿಯು ನನ್ನ ಮೇಲೆ ಯಾಕೆ ಕೇಸ ಮಾಡಿರುತ್ತಾಳೆ ಎಂದು ನಾನು ಹೊಳ್ಳಿ ಕೇಸ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. 2013 ರಲ್ಲಿ ನನ್ನ ತಾಯಿ ನನ್ನ ಜೊತೆ ಇದ್ದಾಗ ಆಕೆಯನ್ನು ನಾನು ಚೆನ್ನಾಗಿ ನೋಡಿಕೊಂಡು ಹೋಗಲಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ನನ್ನ ತಾಯಿ ಯಲಬುರ್ಗಿಗೆ ಹೋಗಿ ನನ್ನ ತಂಗಿಗೆ ಹೇಳಿ ವಕೀಲರ ಹತ್ತಿರ ಕರೆದುಕೊಂಡು ಬಂದು ಮಾಹಿತಿ ಕೊಟ್ಟು ಕೇಸ ಹಾಕಿದ್ದಳು ಎಂದರೆ ಸರಿಯಲ್ಲ. ಈ ಕೇಸ ಹಾಕಲು ಸಂಪೂರ್ಣ ಮಾಹಿತಿಯನ್ನು ನನ್ನ ತಾಯಿ ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಕೆ 2 ಕಡೆ ಇದ್ದಾಳೆ ಎಂದು ನುಡಿಯುತ್ತಾರೆ. ಈ ಕೇಸ ಮೊದಲು ಡಿಕ್ರಿ ಆದ ಬಳಿಕ ನಾನು ನನ್ನ ತಾಯಿಯನ್ನು ನನ್ನ ಮನೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಂತರ ನನ್ನ ತಾಯಿಯ ಮೂಲಕ ಮೇಲ್ಮನವಿ ಸಲ್ಲಿಸಿ ಕೇಸನ್ನು ವಾಪಸ್ಸು ಈ ನ್ಯಾಯಾಲಯಕ್ಕೆ ತೆಗೆದುಕೊಂಡು ಬಂದು ನನ್ನ ತಾಯಿಯ ವಯಸ್ಸಿನ ದುರ್ಲಾಭ ಪಡೆದುಕೊಂಡು ಆಕೆಯ ಪರವಾಗಿ ನಾನೇ ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ವಾದ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಮೇಲೆ ಕೇಸ ಹಾಕಿದಾಗ ಉದ್ದೇಶಪೂರ್ವಕವಾಗಿ ನಾನು  ಹಾಜರಾಗದೇ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ  ಎಂದು ಗೈರು ಉಳಿದಿದ್ದೆ ಎಂದರೆ ಅದೇ ಹೊಲಕ್ಕೆ ದುಡ್ಡು ಕೊಟ್ಟಲು ದುಡಿಯಲು ಹೋಗಿದ್ದೆ, ಹಾಗೇ ದುಡಿದು ತಂದು ದುಡ್ಡು ತಂದಿರುತ್ತೇನೆ ಎಂದು ನುಡಿಯುತ್ತಾರೆ. ಹೊಸಪೇಟೆಗೆ, ಮಂಗಳೂರಿಗೆ, ಬೆಂಗಳೂರಿಗೆ ಹೋಗಿ ದುಡಿದುಕೊಂಡು ಬಂದಿರುತ್ತೇವೆ. ಕಿರುಬಾಯಿ ಅವರು ಹೊಲದ ದುಡ್ಡು ಕಟ್ಟಿರುತ್ತಾರೆ. ಈ ಕೇಸ ಹಾಕಿದ ಸಂದಂರ್ಭದಲ್ಲಿ ನಾವು ದುಡಿಯಲು ಹೋಗಿದ್ದೇವು, ನಾವು ಕಿರುಬಾಯಿಗೆ ಹಣ ಕೊಟ್ಟಿರುತ್ತೇವೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೂ ಮತ್ತು ನನ್ನ ತಂಗಿಗೂ ಮತ್ತು ತಾಯಿಗೂ ಸಮಾನ ಹಕ್ಕು ಇದ್ದರು ಸಹ ವಾದಿಯ ಹಕ್ಕನ್ನು ಮುಳುಗಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಸ್ವಯಾರ್ಜಿತ ಆಸ್ತಿ ಅಲ್ಲ, ಅದು ನನ್ನ ತಾಯಿ, ತಂಗಿ ಹಾಗೂ ನನ್ನ ಜಂಟಿ ಕುಟುಂಬದ ಆಸ್ತಿ, ಅದನ್ನು ನಾಮಮಾತ್ರಕ್ಕೆ ನನ್ನ ಹೆಸರಿನಲ್ಲಿ ಖರೀದಿ ಮಾಡಿತ್ತು ಎಂದರೆ ಸರಿಯಲ್ಲ. ನಾಮಮಾತ್ರಕ್ಕೆ ನನ್ನ ಹೆಸರಿನಲ್ಲಿ ಇರುವ ಖರೀದಿ ಪತ್ರವನ್ನು ದುರುಪಯೋಗ ಪಡಿಸಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಯಾವತ್ತು ಸಂಪೂರ್ಣ ಮಾಲೀಕಳು ಅಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಸಹ ನಾನು, ನನ್ನ ತಾಯಿ, ನನ್ನ ತಂಗಿ ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**